ಆ) 37,060

ಇ) ಹೌದು ತ್ರಿವರ್ಣ ಪಡಿತರ ಚೀಟಿಗಳ ಬದಲಿಗೆ ಹಸಿರು ಪಡಿತರ ಚೀಟಿಗಳನ್ನು ನೀಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಪ್ರಸ್ತಾವನೆ ಪರಿಶೀಲನೆಯಲ್ಲಿರುವುದರಿಂದ ಈ ಮಾಹಿತಿಯು ಸದ್ಯಕ್ಕೆ ಲಭ್ಯವಿರುವುದಿಲ್ಲ.

ಉ) ಈಗ ವಿತರಣೆಯಾಗಿರುವ ತ್ರಿವರ್ಣ ಪಡಿತರ ಚೀಟಿಗಳಲ್ಲಿ ಹಾಳೆಗಳು ಮುಗಿಯುತ್ತಾ ಬಂದಿರುವುದರಿಂದ ಹಾಗೂ ಖೋಟ್ಟೆ ಪಡಿತರ ಚೀಟಿಗಳನ್ನು ಬದಲಾಯಿಸಲು ಉದ್ದೇಶಿಸಿದೆ.

ಊ) ಇಲ್ಲ.

ಋ) ದಿನಾಂಕ:1.4.1995ರಿಂದ ಹಸಿರು ಕಾರ್ಡುಗಳನ್ನು ವಿತರಿಸುವ ಕ್ರಮ ಕೈಗೊಳ್ಳಲಾಗಿದೆ.

ವಿಷಯ:ಜಯನಗರದಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಕಛೇರಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:158(179)

ಶ್ರೀರಾಮಲಿಂಗ ರೆಡ್ಡಿ(ಜಯನಗರ)

ಮಾನ್ಯ, ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಬೆಂಗಳೂರು ಜಯನಗರ ಹಾಗೂ ಉತ್ತರಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿರತಕ್ಕ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು.

ಆ) ಈ ಅಂಗಡಿಗಳು ಚಾಮರಾಜಪೇಟೆಯಲ್ಲಿರುವ ದಕ್ಷಿಣವಲಯ ಕಛೇರಿಯ ಅಧೀನದಲ್ಲಿ ಬರುವುದೇ ನಿಜವೇ?

ಇ) ದಕ್ಷಿಣವಲಯ ಕಛೇರಿಯ ಅಧೀನದಲ್ಲಿ ಬರತಕ್ಕ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು.

ಈ) ನಾಗರೀಕರಿಗೆ ಅನುಕೂಲವಾಗಲು ಹಾಗೂ ವಿಳಂಬವನ್ನು ತಪ್ಪಿಸಲು ಜಯನಗರದಲ್ಲಿ ಆಹಾರ ಮತ್ತು ನಾಗರೀಕ ಸರಬರಾಜುವಲಯ ಕಛೇರಿಯನ್ನು ಪ್ರಾರಂಭಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ.

ಶ್ರೀ. ಎಸ್. ನಂಜಪ್ಪ

ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು.

ಅ) ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ನ್ಯಾಯ ಬೆಲೆ ಅಂಗಡಿಗಳ ವಿವರ:

1.		ಜಯನಗರ ಪ್ರದೇಶ	:	59
2.		ಉತ್ತರಗಳ್ಳಿ ಕ್ಷೇತ್ರ	:	333
	56	ದಕ್ಷಿಣವಲಯ		
	15	ಉತ್ತರವಲಯ		
	64	ಪಶ್ಚಿಮವಲಯ		
	198	ದಕ್ಷಿಣ ತಾಲ್ಲೋಕು.		
	333			

ಆ) ಜಯನಗರ ಪ್ರದೇಶದ 69 ಹಾಗೂ ಉತ್ತರಹಳ್ಳಿ ಕ್ಷೇತ್ರದ 56 ನ್ಯಾಯ ಬೆಲೆ ಅಂಗಡಿಗಳು ದಕ್ಷಿಣವಲಯ ಕಛೇರಿಯ ಅಧೀನಕೊಳ್ಳಪಡುತ್ತದೆ.

ಇ) 347

ಈ) ನಾಗರೀಕರಿಗೆ ಕಾರ್ಡುದಾರರಿಗೆ ಯಾವುದೇ ಅನಾನುಕೂಲ ಹಾಗೂ ವಿಳಂಬ ಆಗುತ್ತಿಲ್ಲ ವಾದ ಕಾರಣ ಮತ್ತೊಂದು ವಲಯ ಕಛೇರಿ ಪ್ರಾರಂಭಿಸಲು ಪ್ರಸ್ತಾವನೆ ಸದ್ಯಕ್ಕೆ ಇರುವುದಿಲ್ಲ.

ವಿಷಯ:ಬೆಂಗಳೂರು ದಕ್ಷಿಣವಲಯದ ಆಹಾರ ಮತ್ತು ನಾಗರೀಕ ಸರಬರಾಜು ಕಛೇರಿಯಿಂದ ನೀಡಿರುವ ಸೀಮೆಎಣ್ಣೆ ಲೈಸನ್ಸ್‌ಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:159(182)

ಶ್ರೀ. ರಾಮಲಿಂಗರೆಡ್ಡಿ(ಜಯನಗರ)

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ.

1. ಬೆಂಗಳೂರು ದಕ್ಷಿಣ ವಲಯ ಆಹಾರ ಮತ್ತು ನಾಗರೀಕ ಸರಬರಾಜು ಕಛೇರಿಯಿಂದ ನೀಡಿರುವ ಸೀಮೆಎಣ್ಣೆ ಲೈಸೆನ್ಸಗಳ ಸಂಖ್ಯೆ ಎಷ್ಟು?
2. ಇವುಗಳ ಪೈಕಿ ಡಿಸೆಂಬರ್ 1994ರಿಂದ ಫೆಬ್ರವರಿ 1995ರ ಕೊನೆಯವರೆಗೆ ನೀಡಿರುವ ಲೈಸೆನ್ಸಗಳ ಸಂಖ್ಯೆ ಎಷ್ಟು?
3. ಇತ್ತೀಚೆಗೆ ಹೊಸದಾಗಿ ಕಾನೂನು ಉಲ್ಲಂಘನೆ ಮಾಡಿ ಲೈಸೆನ್ಸಗಳನ್ನು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?